Sri H. SIDDAIYA.—Some such cases were brought to the notice of Government and they were disposed of.

Janab SYED ABDUR RAHMAN.—If some cases have not been disposed of and are still pending, will the Government be pleased to consider them?

Sri H. SIDDAIYA.—I do not remember even a single case pending with the Government.

Janab SYED ABDUR RAHMAN.—If they are pending?

Sri H. SIDDAIYA.—That does not arise in view of the previous answer.

Janab SYED ABDUR RAHMAN.—If the cases have not been disposed of, will they be reconsidered?

Sri H. SIDDAIYA.—It is a hypothetical question.

Mr. SPEAKER.—Next question.

Question No. 17. Sri S. Kariappa.

Tractors and Bulldozers.

Q.—17. **Sri S. KARIAPPA** (Bangalore District—General).—

Will the Government be pleased to state:—

(*a*) the total amount so far invested on (i) tractors and (ii) bulldozers by them;

(*b*) the total annual expenditure on the establishment of tractors and bulldozers;

(*c*) the extent of land (i) ploughed and (ii) levelled up by them since they were purchased;

(*d*) the numbers of tractors and bulldozers that are damaged so far;

(*e*) the extent of loss on that account?

A.—**Sri T. MARIAPPA** (Home Minister).—

(*a*) Rs. 33,72,590.

(*b*) Rs. 5,13,951.

(*c*) 40,000 acres ploughed, earth clearing 4,135 c.yds.; earth levelling 34,809 c.yds.; jungle clearing 900 acres.

(*d*) One H. D. 7 Bulldozer.

(*e*) Rs. 40,563 (being the cost of Machine).

ಶ್ರೀ ಎಸ್. ಕರಿಯಪ್ಪನವರು.—ಈಗ ಕೊಂಡಿರುವ ಟ್ರಾಕ್ಟರುಗಳೆಷ್ಟು?

***ಶ್ರೀ ಟಿ. ಮರಿಯಪ್ಪನವರು.**—140 ಹೊಸದು ಮತ್ತು 6 ಹಳೆಯದು; ಒಟ್ಟು 146.

ಶ್ರೀ ಎಸ್. ಕರಿಯಪ್ಪನವರು.—ಬುಲ್‌ಡೋಜರು ಗಳೆಷ್ಟಿವೆ?

ಶ್ರೀ ಟಿ. ಮರಿಯಪ್ಪನವರು.—ಇಪ್ಪತ್ತೊಂದು.

ಶ್ರೀ ಎಸ್. ಕರಿಯಪ್ಪನವರು.—ಅದನ್ನು ನೋಡಿ ಕೊಳ್ಳುವುದಕ್ಕೆ ಸಿಬ್ಬಂದಿಯನ್ನಿಟ್ಟು ಆದು ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಿವೆಯೆಂಬ ಬಗ್ಗೆಯ ಸರ್ಕಾರಕ್ಕೆ ವರದಿಯನ್ನು ತರಿಸಿಕೊಳ್ಳುತ್ತಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ವರದಿ ಬರುತ್ತಿದೆ.

ಶ್ರೀ ಎಸ್. ಕರಿಯಪ್ಪನವರು.—ಈಗ 40 ಸಾವಿರ ಎಕರೆ ಉತ್ತಿದ್ದಾರೆಂದು ಹೇಳಿದೆ. ಅದು ಇವುಗಳನ್ನು ಕೊಂಡು ಕೊಂಡ ಮೇರೆ ಆಗಿರುವುದು ತಾನೆ?

ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಸ್. ಕರಿಯಪ್ಪನವರು.—ಕೊಂಡು ಎರಡು ವರ್ಷ ಆಗಿದೆಯಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಸ್ಟೋಟೀಸ್ ಬೇಕು. ಕೆಲವು ಮೊದಲು, ಇನ್ನು ಕೆಲವು ಆಮೇಲೆ, ಕೊಳ್ಳಲ್ಪಟ್ಟಿವೆ. ಖಚಿತವಾಗಿ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಈ ಟ್ರಾಕ್ಟರುಗಳು ಎಷ್ಟು ದಿವಸ ಕೆಲಸ ಮಾಡುತ್ತವೆ?

ಶ್ರೀ ಟಿ. ಮರಿಯಪ್ಪನವರು.—ಒಂದು ವರ್ಷದಲ್ಲಿ 80 ದಿವಸ ಕೆಲಸ ಮಾಡುತ್ತವೆಂದು ಅಂದಾಜಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಈಗ ಕೆಲಸ ಮಾಡಿರುವಂತೆ ಅಂಕಿ ಅಂಶಗಳ ಪ್ರಕಾರ ನೋಡಿದರೆ, ವರ್ಷಕ್ಕೆ 16 ದಿವಸ ಅವು ಕೆಲಸವಾಡಿರುವಂತೆ ಕಂಡು ಬರುವುದಿಲ್ಲವೆ?

ಶ್ರೀ ಟಿ. ಮರಿಯಪ್ಪನವರು,—ಹಾಗೆ ಹೇಳುವುದಕ್ಕಾಗುವುದಿಲ್ಲ. ಬೇಸಗೆಯಲ್ಲಿ ಉಳುವುದಿಲ್ಲ. ರೈತರಿಗೆ ಬೇಕಾದಾಗ ಕೊಡಬೇಕಾಗುತ್ತದೆ. ರೈತರು ಕೆಲವರು ಇವುಗಳನ್ನು ಉಪಯೋಗಿಸುತ್ತಿಲ್ಲ. ಇದರ ಅನುಭವ ಕೆಲವರಿಗೆ ಕಡಮೆ. ರೈತರಿಗೆ ಅನುಕೂಲಪಡಿಸಬೇಕೆಂದು ಈ ಯೋಜನೆ ಮಾಡಿದೆ. ಈ ಕೆಲವು ಕಾರಣಗಳಿಂದ ಈಗ ಇದನ್ನು ಉಪಯೋಗಿಸುತ್ತಿರುವುದು ಸ್ವಲ್ಪ ಕಡಮೆಯಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಒಂದು ವರ್ಷಕ್ಕೆ ಮಳೆಗಾಲ 16 ದಿವಸವೇ!

ಶ್ರೀ ಟಿ. ಮರಿಯಪ್ಪನವರು.—ಅದನ್ನು ತಾವೇ ಊಹಿಸಬಹುದು. That is simple rule of three.

ಶ್ರೀ ಎಸ್. ಕರಿಯಪ್ಪನವರು.—ಈಗಿರುವ ಬುಲ್‌ಡೋಜರುಗಳನ್ನು ಖಾಸಗಿ ಉಪಯೋಗಕ್ಕೆ ಕೊಡುವುದುಂಟೆ?

ಶ್ರೀ ಟಿ. ಮರಿಯಪ್ಪನವರು.—ಉಂಟು.

ಶ್ರೀ ಎಸ್. ಕರಿಯಪ್ಪನವರು.—ಇದುವರೆಗೆ ಯಾರಾದರೂ ಖಾಸಗಿ ಮನುಷ್ಯರು ಹೋಗಿ ಕೇಳಿದಾಗ ಕೊಡುವುದಕ್ಕಾಗುವುದಿಲ್ಲ, ಅದು ಸರ್ಕಾರಿ ಉಪಯೋಗಕ್ಕೆ ಮಾತ್ರ ಇರುವುದು, ಎಂದು ಇಲಾಖೆಯವರು ಜವಾಬು ಕೊಟ್ಟಿರುವುದಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಇರುವ ಕಡೆ ಕೊಡ ಬಹುದು; ಕೆಲವು ಸರ್ಕಾರಿ ಉಪಯೋಗಕ್ಕೂ ಇವೆ.

ಶ್ರೀ ಎಸ್. ಕರಿಯಪ್ಪನವರು.—ಇದರ ಮೇಲೆ ಸರ್ಕಾರದ ಹತೋಟಿ ಇದೆಯೆ ಅಥವಾ ಬೇರೆ ಏನಾದರೂ ಏರ್ಪಾಡಿದೆಯೆ;

ಶ್ರೀ ಟಿ. ಮರಿಯಪ್ಪನವರು.—ಯಾವ ಇಲಾಖೆಗೆ ವಹಿಸಿದೆಯೋ ಅವರು ಅದರ ಕೆಲಸವನ್ನು ಮಾಡುತ್ತಾರೆ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ, ಮಂತ್ರಿಗಳು ಇಂಥ ಕಡೆಗೆ ಕೊಡಬೇಕೆಂದು ಹೇಳಿದರೆ ಅದಕ್ಕೆ ಗೌರವ ಕೊಡಬೇಕಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಅದು ಊಹಾಪ್ರಶ್ನೆ.

ಶ್ರೀ ಎಸ್. ಕರಿಯಪ್ಪನವರು.—ಅಂಥ ಸಂದರ್ಭದಲ್ಲಿ ಕೊಡದಿರುವುದು ಸರಿಯೇ?

ಶ್ರೀ ಟಿ. ಮರಿಯಪ್ಪನವರು.—ಅದೂ ಸಹ ಊಹಾ ಪ್ರಶ್ನೆ.

ಶ್ರೀ ಎಸ್. ಕರಿಯಪ್ಪನವರು.—ಕೆಲವು ಕಡೆ ಆ ರೀತಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರೆ ಅದು ಸರಿಯಾದ ಉತ್ತರವೆಂದು ಭಾವಿಸುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಹೀಗೆ ಊಹಾ ಪ್ರಶ್ನೆಗಳನ್ನು ಹಾಕುವುದು ಉಚಿತವಲ್ಲ. ನ್ಯೂನತೆಗಳನ್ನು ಗಮನಕ್ಕೆ ತಂದರೆ ವಿಚಾರ ಮಾಡುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—ನರ್ಕಾರದ ಗಮನಕ್ಕೆ ಅಂಥ ಸಂದರ್ಭಗಳನ್ನು ತಂದರೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ ಕೈಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—ಈಗ ಬುರ್‌ಡೋ ಜರು ಮಾತ್ರ ರಿಪೇರಿ ಆಗಿದೆಯೆಂದು ತಿಳಿಸಿದ್ದೀರಿ. ಹಾಗಾದರೆ ಟ್ರಾಕ್ಟರುಗಳು ರಿಪೇರಿ ಆಗಿಲ್ಲವೆಂದು ತಿಳಿದುಕೊಳ್ಳಬಹುದೆ?

ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ. ಕೆಲವು ಟ್ರಾಕ್ಟರುಗಳೂ ರಿಪೇರಿಯಾಗಬೇಕು. ಬುರ್‌ಡೋಜರು ಗಳಿಂದ ಸ್ವಲ್ಪ ನಷ್ಟವಾಯಿತು.

ಶ್ರೀ ಎಸ್. ಕರಿಯಪ್ಪನವರು.—ಎಲ್ಲಿ?

ಶ್ರೀ ಟಿ. ಮರಿಯಪ್ಪನವರು.—ಮುಗುಹಳ್ಳಿಯ ಬಳಿ ಸ್ಕ್ರಬ್ ಜಂಗಲು (Scrub jungle) ಕ್ಲಿಯರ್ ಮಾಡುತ್ತಿದ್ದಾಗ ಹಳ್ಳಕ್ಕೆ ಬಿತ್ತು.

ಶ್ರೀ ಎಸ್. ಕರಿಯಪ್ಪನವರು.—ಟ್ರಾಕ್ಟರುಗಳು ಆ ರೀತಿ ನಷ್ಟಪಟ್ಟಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಇಲ್ಲ.

ಶ್ರೀ ಎಸ್. ಕರಿಯಪ್ಪನವರು.—ಒಂದು ಕಡೆ ಹಾಗೆ ಆಗಿದೆಯೆಂದು ವರ್ತಮಾನ ಪತ್ರಿಕೆಗಳಲ್ಲಿ ಬಂದಿರುವುದು ನಿಜವೆ?

ಶ್ರೀ ಟಿ. ಮರಿಯಪ್ಪನವರು.—ಪತ್ರಿಕೆಗಳ ಸಮಾಚಾರವನ್ನು ಪ್ರಶ್ನೆ ಮಾಡಬಾರದು.

ಶ್ರೀ ಎಸ್. ಕರಿಯಪ್ಪನವರು.—ತೀರ್ಥಹಳ್ಳಿಯಲ್ಲಿ ಹಾಗೆ ಆಯಿತೆಂದು ಹೇಳುತ್ತಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಒಂದು ಎಕರೆಯನ್ನು ಉಳುವುದಕ್ಕೆ ಸಾಮಾನ್ಯವಾಗಿ ಎಷ್ಟು ಕಾಲ ಬೇಕು?

ಶ್ರೀ ಟಿ. ಮರಿಯಪ್ಪನವರು.—ಸುಮಾರು ಎರಡು ಘಂಟೆ ಕಾಲವೆಂದು ಅಂದಾಜುಮಾಡಬಹುದು. ಒಂದು ದಿನಕ್ಕೆ 4ರಿಂದ 5 ಎಕರೆಗಳವರೆಗೆ ಉಳಬಹುದು. ಮಳೆ ಬಿದ್ದಾಗ ಜಾಗ್ರತೆ ಆಗುತ್ತದೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಬೇಸಿಗೆಯಲ್ಲಿ ಕೂಡ ಉಳುವ ಯೋಜನೆ ಇದೆ. ಆಗ ರೈತರು ಬೇಕೆಂದರೆ ಟ್ರಾಕ್ಟರುಗಳನ್ನು ಕೊಡುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ರೈತರು ಬೇಕೆಂದರೆ ಕೊಡಬಹುದು.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಕೆಲವು ಕಡೆ ತೋಟಗಳನ್ನು ಉಳುವುದಕ್ಕೆ ಬೇಕೆಂದು ಕೇಳಿದಾಗ ಅಗ್ರಿಕಲ್‌ಚರರ್ ಇಂಜಿನಿಯರ್‌ರವರು ಒಂದೇ ಕಡೆ 200 ಎಕರೆ ಜಮೀನಿದ್ದರೆ ಮಾತ್ರ ಕೊಡುತ್ತೇವೆಂದು ಹೇಳಿದುದು ನಿಜವೆ?

ಶ್ರೀ ಟಿ. ಮರಿಯಪ್ಪನವರು.—ಇದು ಲೌಕಿಕ ವಿಷಯ. ಒಂದೇ ಕಡೆ compact block ಆಗಿರುವ ಜಮೀನಿದ್ದರೆ ಅಂತಹ ಕಡೆಗೆ ಮೊದಲು ಕೊಡುವುದು ಬುದ್ಧಿವಂತಿಕೆಯ ಕೆಲಸ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಬೇಸಿಗೆ ಕಾಲದಲ್ಲಿ ಕೇಳಿದರೆ ಆಗುವುದಿಲ್ಲವೆಂದು ಹೇಳರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಬೇಸಿಗೆ ಕಾಲವಾಗಲಿ ಮಳೆಗಾಲವಾಗಲಿ, ಜಮೀನಿನ ಮೇಲೆ ಒಂದಡಿ ಎರಡಡಿ ನೀರು ನಿಂತಿದ್ದರೆ ಉಳುವುದಕ್ಕಾಗುವುದಿಲ್ಲ; ಹಾಗೆ ನೀರು ನಿಂತಿಲ್ಲದಿದ್ದರೆ ಉಳಬಹುದು.

ಶ್ರೀ ಎಂ. ಎಲ್. ನಂಜರಾಜೈ ಅರಸಿನವರು.—ಒಂದು ಎಕರೆ ಜಮೀನನ್ನು ಟ್ರಾಕ್ಟರುಗಳಿಂದ ಉಳುವುದಕ್ಕೆ ಎಷ್ಟು ಖರ್ಚಾಗುತ್ತದೆ?

ಶ್ರೀ ಟಿ. ಮರಿಯಪ್ಪನವರು.—ಅದನ್ನು ಹೇಳಲು ನೋಟೀಸ್ ಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಕೆಲಸಕ್ಕೆ ಸಹಾಯ ದ್ರವ್ಯವನ್ನು ಸರ್ಕಾರದವರು ಕೊಡುತ್ತಿದ್ದಾರಷ್ಟೆ. ಇದುವರೆಗೆ ವರ್ಷಕ್ಕೆ ಈ ಸಹಾಯ ದ್ರವ್ಯವನ್ನು ಎಷ್ಟು ಕೊಟ್ಟಿದ್ದಿರಿ;

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಸಹಾಯ ದ್ರವ್ಯವಾಗಿ ಕೊಡತಕ್ಕ ಹಣಕ್ಕೆ ಪ್ರತಿಫಲ ಸರ್ಕಾರಕ್ಕೆ ದವನದ ರೂಪದಲ್ಲಿ ಬಂದಿದೆಯೆಂಬುದನ್ನು ದೃಢಪಡಿಸಿ ಕೊಂಡಿದ್ದಾರೆಯೆ?

ಶ್ರೀ ಟಿ. ಮರಿಯಪ್ಪನವರು.—ರೈತರಿಗಂತೂ ಖಂಡಿತವಾಗಿ ಬಂದಿದೆಯೆಂಬುದನ್ನು ದೃಢಪಡಿಸಿ ಕೊಂಡಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಸಹಾಯ ದ್ರವ್ಯವನ್ನು ಕೊಟ್ಟಿರುವುದಕ್ಕೆ ತಕ್ಕಷ್ಟು ಪ್ರತಿಫಲ ದೇಶಕ್ಕೆ ಲಭಿಸಿದೆಯೇ?

ಶ್ರೀ ಟಿ. ಮರಿಯಪ್ಪನವರು.—ದೇಶಕ್ಕೂ ಬಂದಿದೆ, ಯಾರು ಅದರ ಉಪಯೋಗವನ್ನು ಪಡೆದಿದ್ದಾರೋ ಅವರಿಗೂ ಲಭಿಸಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ಟ್ರಾಕ್ಟರುಗಳನ್ನೊದಗಿಸುವ ಯೋಜನೆ ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೆಂಬುದು ಸರ್ಕಾರದವರ ಭಾವನೆಯೆ?

ಶ್ರೀ ಟಿ. ಮರಿಯಪ್ಪನವರು.—ಸರಿಯಾಗಿ ಕೆಲಸ ಮಾಡುತ್ತಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಕಳೆದ ಎರಡು ಮೂರು ವರ್ಷಗಳಿಂದ ನಮ್ಮಲ್ಲಿ ಟ್ರಾಕ್ಟರುಗಳ ಅಭಾವವಿದೆ ಎಂಬುದು ಗಮನಕ್ಕೆ ಬಂದಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಮೊದಲು ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಟ್ರಾಕ್ಟರುಗಳಿರಲಿಲ್ಲ. ಆ ಮೇಲೆ ಬೇರೆ ಬೇರೆ ಕಾಲದಲ್ಲಿ ಹೊಸದಾಗಿ ಟ್ರಾಕ್ಟರು ಗಳನ್ನು ಕೊಂಡುಕೊಂಡಿದ್ದೇವೆ. ಕೇಳಿದವರಿಗೆ ಕೊಡುತ್ತಿದ್ದೇವೆ,

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಎರಡು ವರ್ಷಗಳಿಂದೀಚೆಗೆ ಟ್ರಾಕ್ಟರುಗಳನ್ನು ಕೊಂಡು ಕೊಂಡಿಲ್ಲವೆಂಬುದು ಗೊತ್ತಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಹೋದ ವರ್ಷ ಕೂಡ ಕೊಂಡುಕೊಂಡಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಎಷ್ಟು ಕೊಂಡು ಕೊಂಡಿದ್ದೀರಿ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಒಂದು ಬುರ್‌ಡೋಜರ್ ಅನಾಹುತವಾಯಿತೆಂದು ತಿಳಿಸಿದೆ. ಆದು ಯಾರ ಚಾರ್ಜಿನಲ್ಲಿತ್ತು?

ಶ್ರೀ ಟಿ ಮರಿಯಪ್ಪನವರು.—ಒಬ್ಬರು ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರು ಮತ್ತು ಒಬ್ಬ ಡ್ರೈವರು ಅದರ ಚಾರ್ಜಿನಲ್ಲಿದ್ದರು

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ರೀತಿ ಅಜಾಗರೂಕತೆಯಿಂದ ನಷ್ಟವಾದರೆ ಆ ನಷ್ಟಕ್ಕೆ ಯಾರು ಜವಾಬ್ದಾರರು?

ಶ್ರೀ ಟಿ. ಮರಿಯಪ್ಪನವರು.—ಅಜಾಗರೂಕತೆಯೆಂದು ಹೇಳುವುದಕ್ಕಾಗುವುದಿಲ್ಲ. ಅದೊಂದು ಆಕಸ್ಮಿಕ ಪ್ರಸಂಗ. ನಾನು ಕೂಡ ಆ ಸ್ಥಳವನ್ನು ಹೋಗಿ ಪರಿಶೀಲಿಸಿದ್ದೇನೆ. ಗಿಡಗಳನ್ನು ತೆಗೆದು clear ಮಾಡುತ್ತಿದ್ದಾಗ ಕುಸಿದು, 60–70 ಅಡಿ ಹಳ್ಳಕ್ಕೆ ಬಿದ್ದಿದೆ. ಅದೃಷ್ಟವಶಾತ್ ಡ್ರೈವರ್ ಪ್ರಾಣ ಉಳಿಯಿತು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಟ್ರಾಕ್ಟರುಗಳನ್ನು ಕೊಡುವ ವ್ಯವಸ್ಥೆ ಮಾಡಿರತಕ್ಕ ನೀತಿ ಸರಿಯಾಗಿಲ್ಲವೆಂದು ಹೇಳಿ ಇದುವರೆಗೆ ಜನರಿಂದ ಎಷ್ಟು ಅರ್ಜಿಗಳು ಬಂದಿವೆ?

ಶ್ರೀ ಟಿ. ಮರಿಯಪ್ಪನವರು.—ನೀತಿ ಸರಿಯಾಗಿಲ್ಲವೆಂದು ಅರ್ಜಿಗಳೇನೂ ಬಂದಿಲ್ಲ. ತಮಗೂ ಟ್ರಾಕ್ಟರುಗಳನ್ನೊದಗಿಸಬೇಕೆಂದು ಕೇಳಿ ಅರ್ಜಿಗಳು ಬಂದಿವೆ. ಕೇಳಿದವರೆಲ್ಲರಿಗೂ ಒದಗಿಸಿ ಸಮಾಧಾನ ಪಡಿಸಲು ಸಾಧ್ಯವಾಗಿಲ್ಲವೆಂಬುದು ನಮ್ಮ ಗಮನಕ್ಕೆ ಬಂದಿದೆ. ಅಲ್ಲದ ಕೆಲವು ಸಂದರ್ಭಗಳಲ್ಲಿ ಭೂಮಿಯಲ್ಲಿ ತೇವ ವಿಲ್ಲದೇಯಿರತಕ್ಕ ಸಮಯಗಳಲ್ಲಿ ಉಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅನೇಕ ಸಂದರ್ಭಗಳಲ್ಲಿ ಭೂಮಿ ತೇವವಾಗಿದ್ದೂ ಕೂಡ ಟ್ರಾಕ್ಟರುಗಳು ಕೆಲಸ ಮಾಡದೇಯಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಹಾಗಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಎಣ್ಣೆ, ಗ್ರೀಸು, ಬೋಲ್ಟು, ನಟ್ಟುಗಳು ಮುಂತಾದ ಸಾಮಾನುಗಳಲ್ಲದೆ ನಿಲ್ಲಿಸಿರಬಹುದು. ಅಥವಾ ಯಂತ್ರ ಸ್ವಲ್ಪ ಕೆಟ್ಟು ಹೋಗಿರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ಯಂತ್ರಗಳು ಕೆಟ್ಟುಹೋದರೆ ರಿಪೇರಿ ಮಾಡಲು ವರ್ಕ್‌ಷಾಪುಗಳ ಎಲ್ಲೆಲ್ಲಿವೆ?

ಶ್ರೀ ಟಿ. ಮರಿಯಪ್ಪನವರು.—ಬೆಂಗಳೂರಿನಲ್ಲಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಶಿವಮೊಗ್ಗದಲ್ಲಿ ಒಂದು ಟ್ರಾಕ್ಟರು ಕೆಟ್ಟು ಹೋದರೆ ಅದನ್ನು ರಿಪೇರಿ ಮಾಡಲು ಬೆಂಗಳೂರಿಗೆ ತೆಗೆದುಕೊಂಡು ಹೋಗಬೇಕೆ?

ಶ್ರೀ ಟಿ. ಮರಿಯಪ್ಪನವರು.—ಈಗಿನ ಪರಿಸ್ಥಿತಿಯಲ್ಲಿ ನಮ್ಮಲ್ಲಿಗೆ ಬೆಂಗಳೂರಿನಲ್ಲಿಗೇ ರಿಪೇರಿ ಮಾಡಬೇಕಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗಿನ ವ್ಯವಸ್ಥೆ ಸಮರ್ಪಕವಾಗಿಲ್ಲವೆಂಬುದು ಗೊತ್ತಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಹೊಸ ಟ್ರಾಕ್ಟರುಗಳಾಗಿರುವುದರಿಂದ ಹೆಚ್ಚು ತೊಂದರೆ ಕೊಡುವುದಿಲ್ಲವೆಂದು ತಿಳಿದುಕೊಂಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ಸ್ಪೇರ್ ಪಾರ್ಟುಗಳು, ಗ್ರೀಸು ಮುಂತಾದವು ಸಮಯಕ್ಕೆ ಒದಗದೆ ತೊಂದರೆಯಾಗಿರಬಹುದು. ಇಂಡಿಯಾ ದೇಶದ ಇತರ ಭಾಗಗಳಲ್ಲಿಯೂ ಕೂಡ ಇಂತಹ ತೊಂದರೆಗಳು ಇದ್ದೇ ಇವೆ, ಇಲ್ಲ ಮಾತ್ರವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸಾರ್ವಜನಿಕರು ಟ್ರಾಕ್ಟರುಗಳನ್ನು ಕೊಂಡು ಕೊಂಡು ಅವರೇ ಇತರರಿಗೆ ಬಾಡಿಗೆಗೆ ಕೊಡತಕ್ಕ ವ್ಯವಸ್ಥೆ ಮಾಡಿದರೆ

Sri T. MARIAPPA.—It is a hypothetical question.

Sri H. M. CHANNABASAPPA.—Do You create private agencies to act on behalf of Government to hire out tractors for the benefit of the public?

Sri T. MARIAPPA.—Sir, it is a hypothetical question. If anybody were to come forward, we are quite willing.

Sri H. M. CHANNABASAPPA.—Have the Government thought of such procedure?

Sri T. MARIAPPA.—The Government even negotiated with a big firm to take up this question, but they were not quite willing.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹನಗೋಡಿನ ಪುಟ್ಟಯ್ಯನೆಂಬುವರು ಈ ರೀತಿ ಮಾಡಲು ಮುಂದೆ ಬಂದು ಒಂದು ಅರ್ಜಿಯನ್ನು ಕೊಟ್ಟರೂ ಹದಿನೈದು ದಿನಗಳ ಮೇಲೆ ವ್ಯವಸಾಯದ ಇಲಾಖೆಯವರು ಈ ರೀತಿ ಮಾಡುವುದಕ್ಕಾಗುವುದಿಲ್ಲವೆಂದು ಉತ್ತರ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಏಕೆ ಅವರಿಗೆ ಕೊಡಲಿಲ್ಲವೆಂಬುದನ್ನು ವಿಚಾರಿಸುತ್ತೀರಾ?

Sri T. MARIAPPA.—Sir, it is a hypothetical question. If I had admitted that that particular individual had come to Government, that he wanted to purchase and had been refused, then this question arises. Only it must be enquired into.

Sri H. M. CHANNABASAPPA.—Will the Government enquire into the matter?

Sri T. MARIAPPA.—I will enquire into the question whether that particular individual had come and had been refused.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗೆ ಮಾಡಿದರೆ ಆಗ ಸತ್ಯಾಂಶ ಹೊರ ಬೀಳುತ್ತದೆ. ಯಾವ ಅಧಿಕಾರಿಗಳು ಈ ರೀತಿ ಮಾಡಿದರಂಬುದೂ ಹೊರಬೀಳುತ್ತದೆ ತಾವು ಈ ವಿಷಯವನ್ನು ವಿಚಾರಣೆ ಮಾಡಿ ಯಾವ ಅಧಿಕಾರಿಗಳು ಇದಕ್ಕೆ ಕಾರಣರೋ ಅವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಸಿದ್ಧವಾಗಿದ್ದೀರಾ?

Sri T. MARIAPPA.—It is hypothetical.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ಯಾಮಿ, ಟ್ರಾಕ್ಟರುಗಳನ್ನು ಮತ್ತು ಬುಲ್ ಡೋಜರುಗಳನ್ನು ಬಾಡಿಗೆಗೆ ಕೊಡುವುದಾಗಿ ಹೇಳಿದಿರಿ. ಹೀಗೆ ಬಾಡಿಗೆಗೆ ತೆಗೆದುಕೊಂಡಿರುವವರಿಂದ ಬಾಡಿಗೆ ಬಾಕಿ ಏನಾದರೂ ಬರಬೇಕಾಗಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಕೆಲವು ಸಂದರ್ಭಗಳಿವೆ.

ಶ್ರೀ ಎಚ್. ಕೆ ವೀರಣ್ಣಗೌಡರು.—ಎಷ್ಟು ಬಾಕಿ

ಶ್ರೀ ಟಿ. ಮರಿಯಪ್ಪನವರು.— ನೋಟೀಸ್.

ಶ್ರೀ ಎಚ್. ಕೆ. ವೀರಣ್ಣಗೌಡರು —ಈಗ ಇರುವ ಎಲ್ ಡೋಜರುಗಳನ್ನೆಲ್ಲಾ ಕೆರೆ ಅಂಗಳಗಳ ಹೂಳು ಗೆಯುವುದಕ್ಕೇ ಉಪಯೋಗಿಸುತ್ತಿದ್ದಾರೆಯೋ ಅಥವಾ ಾಸಗೀ ಜನರ ಉಪಯೋಗಕ್ಕೂ ಕೊಡುತ್ತಿದ್ದಾರೆಯೆ?

ಶ್ರೀ ಟಿ. ಮರಿಯಪ್ಪನವರು.—ಈಗ ಕೆರೆಗಳ ಹೂಳು ಗೆಯುವ ಕೆಲಸಕ್ಕೆ ಕೇಂದ್ರ ಸರ್ಕಾರದವರು ಗ್ರ್ಯಾಂಟು ೂಟ್ಟಿರುವುದರಿಂದ ಈ ಕೆಲಸಕ್ಕಾಗಿ ಉಪಯೋಗಿಸುತ್ತಿ ್ದೇವೆ. ಇದರಿಂದ ಹೆಚ್ಚಿನ ಪ್ರಯೋಜನವಾಗುತ್ತ ೆಂದು ಅವರು ಹೇಳಿದುದರಿಂದ ಈ ರೀತಿ ಮಾಡಲಾಗು ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಸಾವಿರಾರು ಕರೆ ಖಾಸಗೀ ಜನರ ಜಮೀನುಗಳು ಮಟ್ಟವಿಲ್ಲದೇ ುರುವುದರಿಂದ ಅವುಗಳನ್ನು ಸರಿಮಾಡಲು ುಲ್ ಡೋಜರುಗಳು ಉಪಯೋಗವಾಗುತ್ತವೆಂಬುದು ರ್ಕಾರದವರ ಗಮನಕ್ಕೆ ಬಂದಿದೆಯೆ? ಆ ರೀತಿ ಅರ್ಜಿ ಂದಿದ್ದವೆ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಕೆಲವು ಕಡೆ ಜಮೀನನ್ನು ಟೆರೇಸ್ ಮಾಡುವುದು ಅಗತ್ಯ. ಅದನ್ನು ಾಡಿಕೊಡಬೇಕೆಂದು ಸರ್ಕಾರಕ್ಕೆ ಆ ಪ್ರದೇಶದ ಜನ ಂದ ಅರಿಕೆ ಬಂದಿತ್ತು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅದನ್ನು ಮಾಡಿ ಲು ಪ್ರಯತ್ನ ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ಯಾವ ಪರತ್ತುಗಳ ೀಲೆ ಕೊಟ್ಟರೆ ಉತ್ತಮವೆಂಬುದನ್ನು ಪರ್ಯಾಲೋಚಿ ುತ್ತಿದ್ದೇವೆ. ಈಚೆಗೆ ಈ ರೀತಿ ಮತ್ತಾರೂ ಕೇಳಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಬಾಯಿ ಮಾತಿ ಲ್ಲಿ ಸಾಧ್ಯವಾಗುತ್ತದೆಂದು ಹೇಳಿ, ಆ ಮೇಲೆ ರೈತರು ರ್ಜಿಹಾಕಿ ಕೇಳಿದಾಗ ಕೆರೆ ಹೂಳು ತೆಗೆಯುವುದಕ್ಕೆ ಾತ್ರ ಉಪಯೋಗಿಸುವುದು ಎಂದು ಹೇಳಿ ಕೊಡದಿರಲು ಾರಣವೇನು?

ಶ್ರೀ ಟಿ. ಮರಿಯಪ್ಪನವರು.—ಟೆರೇಸ್ ಮಾಡುವು ಕ್ಕೆ ಉಪಯೋಗಿಸಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಟ್ರಾಕ್ಟರುಗಳ ಿಂದಲಕ ಜಮೀನನ್ನು ಮಟ್ಟಮಾಡಿಕೊಳ್ಳಲು ಸಾಧ್ಯ ಾಗುವುದಿಲ್ಲವೆಂಬುದು ಗೊತ್ತಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಅದನ್ನು ರೈತರು ಮಾಡಿಕೊಂಡರೆ, ಟ್ರಾಕ್ಟರುಗಳಿಂದ ನಾವು ಜಮೀನನ್ನು ುತ್ತುಕೊಡುತ್ತೇವೆ.

ಶ್ರೀ ಎಚ್. ಕೆ. ವೀರಣ್ಣಗೌಡರು —ಅವರೇ ಕೊಂಡು ೊಂಡರೆ?

ಶ್ರೀ ಟಿ. ಮರಿಯಪ್ಪನವರು.—ಸಂತೋಷ.

Sri M. GOVINDA REDDY.—(Chitaldrug District—General).—Is it a fact hat the plough-shares of these tractors re wearing out?

Sri. T. MARIAPPA.—It depends upon the particular make of the plough-hares.

Sri M. GOVINDA REDDY.—What is he arrangement made for getting hares?

Sri T. MARIAPPA.—We are buying hem.

Sri M. GOVINDA REDDY.—From which agency?

Sri T. MARIAPPA.—I want notice.

Sri M. GOVINDA REDDY.—Cannot plough-shares be manufactured in the Bhadravati Iron Works?

Sri T. MARIAPPA.—I am not sure.

Sri M. GOVINDA REDDY.—Have the Works manufactured any so far?

Sri T. MARIAPPA.—I want notice.

Sri M. GOVINDA REDDY.—Have Messrs. Kirloskar Brothers of Harihar manufactured any plough-shares?

Sri T. MARIAPPA.—I want notice to answer that question because on quotations we get them.

Sri M. GOVINDA REDDY.—Have the Government given any thought to this aspect of the matter?

Sri T. MARIAPPA.—Certainly. All aspects of the question have been considered.

Sri M. GOVINDA REDDY.—Is it a fact that many tractors have not been useful because they have no plough-shares?

Sri T. MARIAPPA.—It is also a fact that in the early stages there was acute shortage of plough-shares.

Sri M. GOVINDA REDDY.—Are the Government not convinced that the supply of plough-shares is insufficient?

Sri T. MARIAPPA.—We have placed orders for an adequate supply of plough-shares.

Sri M. GOVINDA REDDY.—Are they in a position to get the required number of plough-shares?

Sri T. MARIAPPA.—Yes.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾನಗಲ್ಲು).—ತಾವು ಈಗ ತೆಗೆದುಕೊಂಡಿರತಕ್ಕ ಟ್ರಾಕ್ಟರುಗಳು ಯಾವ ಕಂಪೆನಿಯವು?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು. ಮೂರು, ನಾಲ್ಕು ತರಹ ಇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಚೆಗೆ ಟ್ರಾಕ್ಟರುಗಳ ತಯಾರಿಕೆ ಅಭಿವೃದ್ಧಿಯಾಗಿದೆ. ಈಗ ನಮ್ಮ ಹತ್ತಿರ ಇರುವುದು ಹಳೇ ಮಾದರಿಯದು ಎಂದು ಕೇಳುತ್ತೇವೆ. ಆ ರೀತಿ ಇದೆಯೇ?

ಶ್ರೀ ಟಿ. ಮರಿಯಪ್ಪನವರು.—ಪೋರ್ಟ್‌ಸೈಟ್ಟೈಪು ಇಲ್ಲ. ಉತ್ತಮ ತರಹದ ಟ್ರಾಕ್ಟರುಗಳು ನಮ್ಮ ಹತ್ತಿರ ಇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಡೆಲ್ಲಿಯೊಳಗೆ ಒಂದು ಇಕ್ವಿಪ್ಮೆಂಟ್‌ನಲ್ಲಿ ಪ್ರೊಪೋಷೆರ್ ತಯಾರು ಮಾಡುತ್ತಾರೆ ಎಂಬ ವರ್ತಮಾನ ಇದೆ. ಅದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಹೊಸದಾಗಿ ಮಾಡುತ್ತಾ ಇದ್ದಾರೆ ಎಂಬುದು ಗೊತ್ತು. They have set up a Central Tractor Organisation. They have got experts from the West and now they are

training people and manufacturing plough-points and many other things.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಡೆಲ್ಲಿಯಲ್ಲಿ ಮತ್ತು ಗಂಗಾ ಖಾದರ್‌ನಲ್ಲಿ ಟ್ರಾಕ್ಟರುಗಳನ್ನು ರಿಪೇರಿ ಮಾಡುವುದಕ್ಕೋಸ್ಕರ ಮೊಬೈಲ್ ವರ್ಕ್‌ಷಾಪುಗಳನ್ನಿಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪನವರು.—ನಮ್ಮ ಗಮನಕ್ಕೆ ಬಂದಿದೆ. ನಾವೂ ಸಹ ಮೊಬೈಲ್ ವರ್ಕ್‌ಷಾಪುಗಳನ್ನು ಏರ್ಪಡಿಸಬೇಕೆಂದು ಪ್ರಯತ್ನಮಾಡಿ, ಒಂದೊಂದು ಡಿಸ್ಟ್ರಿಕ್ಟ್‌ನಲ್ಲೂ ಸಣ್ಣ ಸರ್ವೀಸಿಂಗ್ ಸ್ಟೇಷನ್‌ಗಳನ್ನು ತೆಗೆದು ಸ್ಪೇರ್ ಪಾರ್ಟ್‌ಗಳನ್ನಿಟ್ಟು ರಿಪೇರಿ ಮಾಡಲು ಅನುಕೂಲ ಕಲ್ಪಿಸಬೇಕೆಂದು ಮಾಡಿದ್ದೇವೆ. Very recently we have sanctioned the scheme for tractor organisation.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಟ್ರಾಕ್ಟರುಗಳ ಡ್ರೈವರುಗಳಿಗೆ ಸರಿಯಾಗಿ ಟ್ರೈನಿಂಗ್ ಆಗಿಲ್ಲ. ಮೋಟಾರು ಡ್ರೈವರುಗಳಾಗಿ ಮಿಲಿಟರಿಯಲ್ಲಿದ್ದವರು ಬಂದಿದ್ದಾರೆ. ಜಮೀನುಗಳಲ್ಲಿ ಟ್ರಾಕ್ಟರುಗಳನ್ನು ಹೇಗೆ ಉಪಯೋಗಿಸಬೇಕೆಂಬುದು ಅವರಿಗೆ ಗೊತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪನವರು.—ಇಷ್ಟು ಮಾತ್ರ ಒಪ್ಪಿಕೊಳ್ಳುತ್ತೇನೆ. ಇದು ಹೊಸ ಉದ್ಯಮ, ತರಬೇತಾದವರು ಸಿಕ್ಕಲಿಲ್ಲ. ಆದ್ದರಿಂದ ಮಿಲಿಟರಿ ಸರ್ವಿಸ್‌ನಲ್ಲಿ ಅಲ್ಪ ಸ್ವಲ್ಪ ತರಬೇತಾದವರನ್ನು ನೇಮಕಮಾಡಿಕೊಂಡಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತರಬೇತಾಗಿಲ್ಲದೇ ಇರುವವರು ಡ್ರೈವರುಗಳಾಗಿ ಬಂದು ಬಿಟ್ಟು ಟ್ರಾಕ್ಟರುಗಳನ್ನು ಯಾವ ರೀತಿ ತಿರುಗಿಸಬೇಕೆಂಬುದು ಗೊತ್ತಿಲ್ಲದೆ ಅವರೂ ಕಷ್ಟಪಡುತ್ತಾರೆ, ನಮಗೂ ತೊಂದರೆ ಕೊಡುತ್ತಾರೆ. ಆದ್ದರಿಂದ ಟ್ರೈನಿಂಗ್ ಕೊಡುವುದು ಅತ್ಯಗತ್ಯ ಎಂದು ಒಪ್ಪಿಕೊಳ್ಳುತ್ತೀರಾ ?

ಶ್ರೀ ಟಿ. ಮರಿಯಪ್ಪನವರು.—ಅತ್ಯಗತ್ಯ ಎಂತಲೇ ಆ ರೀತಿ ಟ್ರೈನಿಂಗ್ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಒಂದು ಟ್ರಾಕ್ಟರ್ ಒಂದು ದಿನದಲ್ಲಿ ಎಷ್ಟು ಪ್ರದೇಶ ಉಳುತ್ತದೆ ?

ಶ್ರೀ ಟಿ. ಮರಿಯಪ್ಪನವರು.—ನಾಲ್ಕರಿಂದ್ದ ಐದು ಎಕರೆಯಷ್ಟು ಉಳುತ್ತದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಲ್ಲಿ ತಾವು ಕೊಟ್ಟಿರುವ ಅಂಕಿ ಅಂಶಗಳು ಸರಿಯಾಗಿಲ್ಲ. ಶೇಕಡ 50ರಷ್ಟೂ ಕೂಡ ಕೆಲಸಮಾಡುತ್ತಿಲ್ಲ. ಇದನ್ನು ಸರ್ಕಾರದವರು ಪರಿಶೀಲಿಸಿದ್ದಾರೆಯೇ ?

ಶ್ರೀ ಟಿ. ಮರಿಯಪ್ಪನವರು.—ಹಾಗೆ ಹೇಳುವುದಕ್ಕಾಗುವುದಿಲ್ಲ. For various reasons, some of the tractors were out of order.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಷ್ಟು ಎಕರೆ ಮಾತ್ರ ಉಳಬೇಕು, ಟ್ರಾಕ್ಟರಿನ ಭಾಗಗಳು ಸವೆದು ಹೋಗಕೂಡದು ಎಂಬುದಾಗಿ ಟ್ರಾಕ್ಟರುಗಳನ್ನು ಉಪಯೋಗಿಸುವಾಗ ಡ್ರೈವರುಗಳಿಗೆ ತಿಳಿವಳಿಕೆ ಕೊಟ್ಟಿರುತ್ತಾರೆ ಎಂದು ನನಗೆ ವರ್ತಮಾನ ಬಂದಿದೆ. ಅದು ನಿಜವೇ ; ಆ ರೀತಿ ಏನಾದರೂ ತಿಳಿವಳಿಕೆ ಕೊಟ್ಟಿರುತ್ತಾರೆಯೇ ?

ಶ್ರೀ ಟಿ. ಮರಿಯಪ್ಪನವರು.—ಆ ತರಹ ತಿಳಿವಳಿಕೆ ಏನೂ ಇಲ್ಲ. ಎಚ್ಚರಿಕೆಯಿಂದ, ಯಾರು ಟ್ರಾಕ್ಟರನ್ನು ತೆಗೆಸಿಕೊಂಡು ಹೋಗುತ್ತಾರೋ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಉಳಬೇಕೆಂದು ತಿಳಿಸಲಾಗಿರುತ್ತದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನನ್ನ ಸ್ವಂತ ಅನುಭವದಿಂದ ಹೇಳುತ್ತಾ ಇದ್ದೇನೆ. ನನ್ನ ಜಮೀನು ಉಳುವಾಗ ಪ್ಲೋಪಾಯಿಂಟ್ಸ್ ಇಲ್ಲ, ಸ್ಪೇರ್ ಪಾರ್ಟ್ಸ್ ಇಲ್ಲ ಎಂಬುದಾಗಿ ಹೇಳಿ, ತೊಂದರೆ ಕೊಟ್ಟರು. ಹೀಗೆ ಕೆಲಸ ನಡೆಯುತ್ತಾ ಇದೆ. ಈ ರೀತಿ ಕೆಲಸ ನಡೆದರೆ ಜನಗಳಿಗೆ ತೊಂದರೆಯಾಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಅವರು ಮಾಡಬಾರದು.

ಶ್ರೀ ಎ. ಭೀಮಪ್ಪ ನಾಯಕರು (ಚಿತ್ರದುರ್ಗ ಜಿಲ್ಲೆ).—ಹೊಸ ತರಹ ಟ್ರಾಕ್ಟರುಗಳು ಎಷ್ಟಿವೆ, ಪೋರ್ಟೆಬಲ್ ಟ್ರಾಕ್ಟರುಗಳು ಎಷ್ಟಿವೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಕೆಲವು ಪ್ರದೇಶಗಳಲ್ಲಿ ಪೋರ್ಟಬಲ್ ಟ್ರಾಕ್ಟರುಗಳಿಂದ ಅನುಕೂಲವಾಗುವುದಿಲ್ಲವೆಂಬುದು ಗೊತ್ತೇ ?

ಶ್ರೀ ಟಿ. ಮರಿಯಪ್ಪನವರು.—ಅವುಗಳಿಂದ ಉಪಯೋಗವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಇದನ್ನು ಯಾರ ಶಿಫಾರಸ್ಸಿನಮೇರೆ ತೆಗೆದುಕೊಂಡಿರಿ ; ಮೈನೂರು ಸರ್ಕಾರದ ಅಧಿಕಾರಿಗಳ ಶಿಫಾರಸ್ಸಿನಮೇರೋ ಅಥವಾ ಹೊರಗಿನವರ ಶಿಫಾರಸ್ಸಿನ ಮೇರೋ ?

ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಶಿಫಾರಸ್ಸಿನ ಮೇರೆ ಏನೂ ತೆಗೆದುಕೊಂಡಿಲ್ಲ. ಹೆಚ್ಚಿಗೆ ಆಹಾರ ಬೆಳೆಯಲು ಅನುಕೂಲವಾಗುವಂಥವುಗಳನ್ನು ತೆಗೆದುಕೊಳ್ಳಲಾಯಿತು.

Sri A. BHEEMAPPA NAIK.—Did you satisfy yourself before purchasing that they were useful and good ?

Sri T. MARIAPPA.—I must say that they were in the market and we had to buy them.

Sri A. BHEEMAPPA NAIK.—Were there not better tractors in the market ? Did the Government test and find out which were the best ?

Sri T. MARIAPPA.—We have taken every care to see that the best available tractors are bought.

Sri A. BHEEMAPPA NAIK.—Do the Government admit that the present tractors are of no use and that there are better tractors in the market ?

Sri T. MARIAPPA.—I do not admit that. But there are light tractors now in the field.

Sri A. BHEEMAPPA NAIK.—Has it come to their notice that the oil used per acre is disproportionate to the acreage ploughed now ?

Sri T. MARIAPPA.—In a few cases that is true. They did consume more oil than what was necessary and that is being attended to.

Sri A. BHEEMAPPA NAIK.—Have the Government at least called for reports from each district of the number of acres ploughed and the oil used?

Sri T. MARIAPPA.—Very recently we have called for an exhaustive report from the new Agricultural Engineer.

Sri A. BHEEMAPPA NAIK.—Before the Agricultural Engineer was appointed, did the Government call for reports from the local officers of the Department?

Sri T. MARIAPPA.—The question is not very clear.

Sri A. BHEEMAPPA NAIK.—Oil was being supplied for the last two years. There was ploughing also. Did the Government call for reports as to the quantity of oil used and the number of acres ploughed with the help of that oil?

Sri T. MARIAPPA.—There was no need for Government to call for any report. On certain occasions Government called for reports. The Head of the Department administers these things.

Sri A. BHEEMAPPA NAIK.—Will the Government tell us what the consumption of oil per acre was for the last two years before the Agricultural Engineer was appointed?

Sri T. MARIAPPA.—I want notice.

Sri A. BHEEMAPPA NAIK.—How many Killefers are there in the Government of Mysore? How many of them were used till to-day?

Sri T. MARIAPPA.—I want notice.

Sri A. BHEEMAPPA NAIK.—Are there any Killefers at all?

Sri T. MARIAPPA.—I want notice.

Sri A. BHEEMAPPA NAIK.—Does the Hon'ble Minister admit that he does not know what a Killefer is?

Sri T. MARIAPPA.—I do not admit that.

Sri A. BHEEMAPPA NAIK.—Cannot the Government say how many Killefers they have?

Sri T. MARIAPPA.—That question does not arise.

Sri A. BHEEMAPPA NAIK.—Did the Government ever think of having a workshop in each district for these things?

Sri T. MARIAPPA.—Yes; that has been recently sanctioned.

Sri A. BHEEMAPPA NAIK.—Is it a fact that out of thirty days the machine did not work for twenty-eight days for want of a bolt or a nut?

Sri T. MARIAPPA.—That is a hypothetical question.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—(ಸಿ) ಪ್ರಶ್ನೆಗೆ ಉತ್ತರವಾಗಿ 40,000 acres ploughed, earth clearing 4,135 c. yds., earth levelling 34,809 c. yds., jungle clearing 900 acres ಎಂಬುದಾಗಿ ಹೇಳಿದ್ದೀರಿ. ಇದರ ಉತ್ಪತ್ತಿ ಎಷ್ಟು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ!

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಅದು ಲಾಭದಲ್ಲಿ ಕೆಲಸಮಾಡುತ್ತಿದೆಯೇ ಅಥವಾ ನಷ್ಟದಲ್ಲಿ ಕೆಲಸ ಮಾಡುತ್ತಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಲಾಭ, ನಷ್ಟದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಜನಗಳಿಗೆ ಉಪಕಾರವಾಗಬೇಕೆಂದು ಸರ್ಕಾರದವರು ಇವುಗಳನ್ನು ತೆಗೆದುಕೊಂಡಿದ್ದಾರೆ. ಬಹಳ ಕಡಿಮೆ ದರದಲ್ಲಿ ಇವುಗಳನ್ನು ಸರ್ಕಾರದವರು ಜನರ ಉಪಯೋಗಕ್ಕೆ ಕೊಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಇತ್ತೀಚೆಗೆ ದರ ಬದರಾವಣೆಯಾಗಿರುವುದು ಗೊತ್ತಿದೆಯೇ!

ಶ್ರೀ ಟಿ. ಮರಿಯಪ್ಪನವರು.—ನಷ್ಟವಾಗದಂತೆ ಕೊಂಡ ಬದರಾವಣೆಯನ್ನು ಮಾತ್ರ ಮಾಡಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಟ್ರಾಕ್ಟರ್ಸ್ ಮೇಲೆ ಯಾರ ಯಾರ ಅಧಿಕಾರವಿದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಜಿಲ್ಲಾ ಬೋರ್ಡ್ ಅಧ್ಯಕ್ಷರು, ಡಿಸ್ಟ್ರಿಕ್ಟ್ ಡೆವಲೆಪ್‌ಮೆಂಟ್ ಆಫೀಸರು ಮತ್ತು ಜಿಲ್ಲಾ ಅಧಿಕಾರಿಗಳು, ಈ ಮೂರು ಜನರ ಅಧಿಕಾರದಲ್ಲಿರುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಮೂರು ಜನರ ಅಧಿಕಾರದಲ್ಲಿದ್ದರೂ, ಪ್ರತಿಯೊಂದು ಜಿಲ್ಲೆಗೂ ಈ ಟ್ರಾಕ್ಟರುಗಳನ್ನು ಸರಿಯಾಗಿ ಓದಗಿಸಲು ಅನುಕೂಲ ಮಾಡುವಂತೆ ತಾವು ಪ್ರಯತ್ನಮಾಡುತ್ತೀರಾ!

ಶ್ರೀ ಟಿ. ಮರಿಯಪ್ಪನವರು.—ತಾವು ಹೇಳುವುದು ಏನೆಂಬುದು ಖಚಿತವಾಗಿ ಗೊತ್ತಾಗುವುದಿಲ್ಲ. ನಾವು ಅಧಿಕಾರವನ್ನು ಆ ಮೂರು ಜನರಿಗೂ ಪಹಿಸಿದ್ದೇವೆ. ಅವರು ಒಂದು ಪ್ರಯಾರಿಟಿ ಪಟ್ಟಿಯನ್ನಿಟ್ಟುಕೊಂಡು ಅದರ ಪ್ರಕಾರ ಹಂಚುತ್ತಾ ಹೋಗುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಮೂರು ಜನರ ಅಧಿಕಾರದಲ್ಲಿ ಅವರು ಒಂದು ತೀರ್ಮಾನಕ್ಕೆ ಬರುವ ಮುಂಚೆ ವ್ಯವಸಾಯದ ಇಲಾಖೆ ಡೈರೆಕ್ಟರವರ ಅಭಿಪ್ರಾಯ ಪಡೆದು, ಅದರ ಪ್ರಕಾರ ಮಾಡಲಾಗುತ್ತದೆಯೆ?

ಶ್ರೀ ಟಿ. ಮರಿಯಪ್ಪನವರು.—ಯಾವ ಯಾವ ರೀತಿ ನಡೆಸಿಕೊಂಡು ಬರಬೇಕೋ, ಅದರಂತೆ ಅವರು ನಡೆಸಿಕೊಂಡು ಬರುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ನಿಮ್ಮಲ್ಲಿ ಯಾರಾದರೂ ಚೆಕ್ಕಿಕರ್ ಎಕ್ಸ್‌ಪರ್ಟುಗಳಿದ್ದಾರೆಯೇ?

ಶ್ರೀ ಟಿ. ಮರಿಯಪ್ಪನವರು.—ಇಂಜನಿಯರುಗಳಿದ್ದಾರೆ.

Mr. SPEAKER.—Question time is over.